**<u>ಸಾಕ್ಷಿಯನ್ನು ದಿನಾಂಕ 12-01-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಬಿ.ಹೆಚ್ ವಕೀಲರಿಂದಃ</u>**

1. ಪ್ರತಿವಾದಿ ನನ್ನ ಸ್ವಂತ ಚಿಕ್ಕಪ್ಪ. ನನ್ನ ತಂದೆಗೆ 3 ಜನ ತಮ್ಮಂದಿರು ಮತ್ತು 5 ಜನ ಸಹೋದರಿಯರು ಇದ್ದಾರೆ. ಪ್ರತಿವಾದಿ ಮತ್ತು ವಿನೋದ್ ಪಾಟೇಲ್ ಎಂಬುವವರ ನಡುವೆ ಆಗಿದೆ ಎಂದು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವ ಕರಾರು ಪತ್ರದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ ವಿನೋದ್ ಪಟೇಲ್ ರವರಿಗೆ ಪ್ರತಿವಾದಿ ರೂ.18 ಲಕ್ಷ ಹಣ ಪಾವತಿ ಮಾಡಿದ್ದಾರೆ ಎಂದು ತೋರಿಸುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಸದರಿ ಹಣವನ್ನು ದಿನಾಂಕ 11.07.2022 ರಂದು ಪಾವತಿ ಮಾಡಲಾಗಿದೆ.

2. ನನಗೆ ಹೃದಯ ಸಂಬಂಧಿ ಕಾಯಿಲೆ ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ದಾವಾ ಸ್ವತ್ತು ಎಂದು ಹೇಳಲಾದ ಅಂಗಡಿಯನ್ನು ನಾನೇ ಕಳೆದ 40 ವರ್ಷದಿಂದ ನಡೆಸುತ್ತಿದ್ದೇನೆ. ಸದರಿ ಅಂಗಡಿ ನಡೆಸಲು ನನ್ನ ಹೆಸರಿಗೆ ಪರವಾನಿಗೆ ಇಲ್ಲ. ಸದರಿ ಪರವಾನಿಗೆ ನನ್ನ ಮತ್ತೊಬ್ಬ ಚಿಕ್ಕಪ್ಪ ನರೇಶ್ ಕುಮಾರ್ ಜೈನ್ ಎಂಬುವವರ ಹೆಸರಿಗೆ ಇದೆ. ನನ್ನ ಹೆಂಡತಿ ನೇಮಿ ಹೆಸರಿಗೆ ಇದೆ ಎನ್ನಲಾದ ಬಾಡಿಗೆ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಡಲು ಕೊಡಲು ತೊಂದರೆ ಇದೆ ಎಂಬ ಪ್ರಶ್ನೆಗೆ ಸಾಕ್ಷಿ ಆ ದಾಖಲೆ ಈಗ ನನ್ನ ಬಳಿ ಇಲ್ಲ ಎನ್ನುತ್ತಾರೆ. ಸದರಿ ದಾಖಲೆ ನನ್ನ ಬಳಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಬಾಡಿಗೆಯ ಅವಧಿ ಮುಗಿದು ಹೋಗಿದೆ ಮತ್ತು ದಾಖಲೆ ಇದೆಯೋ ಇಲ್ಲವೋ ಎಂಬುವುದನ್ನು ನೋಡಿ ಹೇಳುತ್ತೇನೆ ಎನ್ನುತ್ತಾರೆ.

3. ನಿ.ಪಿ.–9 ರ ಚೆಕ್ ನ್ನು ಪ್ರತಿವಾದಿಗೆ ಹೆದರಿಸಿ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ನಿ.ಪಿ.–7 ರಂತೆ ಪ್ರತಿವಾದಿ ನನ್ನ ವಿರುದ್ಧ ದೂರು ಕೊಟ್ಟಾಗ ಅವರಿಗೆ ಸೇರಿದ್ದ ಚೆಕ್ ನ್ನು ನಾನು ಪೊಲೀಸರ ಸಮಕ್ಷಮ ವಾಪಸ್ಸು ಕೊಟ್ಟಿದ್ದೇನೆ ಎಂದರೆ ಸರಿ. ಸದರಿ ಚೆಕ್ ನ್ನು ದಿನಾಂಕ 30.12.2022 ರಂದು ಕೊಟ್ಟಿದ್ದೇನೆ. ಸಾಕ್ಷಿ ಪುನಃ ಪೊಲೀಸರು ವಾಪಸ್ಸು ಕೊಡಿಸಿದ್ದರು ಮತ್ತು ನ್ಯಾಯಾಲಯಕ್ಕೆ ದಾವೆ ದಾಖಲಿಸುವಂತೆ ಹೇಳಿದ್ದರು ಎನ್ನುತ್ತಾರೆ. ನ್ಯೂ ಟೌನ್ ಪೊಲೀಸರ ಮೂಲಕ ಪ್ರತಿವಾದಿಯನ್ನು ಹೆದರಿಸಿ ಅವರಿಂದ 2 ಚೆಕ್ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಕೊಟ್ಟಿದ್ದ 051940 ನಂಬರಿನ ಚೆಕ್ ನ್ನು ನಾನು ನಗದಿಕರಿಸಿಕೊಂಡಿದ್ದೇನೆ ಎಂದರೆ ಸರಿ. ಸದರಿ ಚೆಕ್ಕಿನ ಜೊತೆ ನಿ.ಪಿ.– 9 ರ ಚೆಕ್ ನ್ನು ಯಾವ ಕಾರಣಕ್ಕೆ ನಗದಿಕರಣಕ್ಕೆ ಹಾಜರುಪಡಿಸಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ 2 ಚೆಕ್ ಗಳ ಮೇಲೆ ಬೇರೆ ಬೇರೆ ದಿನಾಂಕ ನಮೂದಾಗಿದ್ದರಿಂದ ಒಂದೇ ದಿನ 2 ಚೆಕ್ ನ್ನು ನಗದಿಕರಣಕ್ಕೆ ಸಲ್ಲಿಸಿಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**